ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು
ADIKAVI SRI MAHARSHI VALMIKI UNIVERSITY, RAICHUR
ಮಂತ್ರಾಲಯ ರಸ್ತೆ, ಯರಗೇರಾ–584133, ರಾಯಚೂರು, ಕರ್ನಾಟಕ
ಆಡಳಿತ ವಿಭಾಗ E-mail: registrarrur@gmail.com

ಸಂ: ಆ.ಶ್ರೀ.ಮ.ವಾ.ವಿ.ರಾ/ಆಡಳಿತ/ವಿ.ಪ/2025–26/ 2461 ದಿನಾಂಕ: 18.12.2025

ಇವರಿಗೆ,
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ
ಎಲ್ಲಾ ವಿದ್ಯಾವಿಷಯಕ ಪರಿಷತ್ ಸದಸ್ಯರು.

ಮಾನ್ಯರೇ,

ವಿಷಯ: ದಿನಾಂಕ 18.12.2025 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಕಳುಹಿಸುವ ಕುರಿತು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ 18.12.2025 ರಂದು ಗುರುವಾರ ಬೆಳಗ್ಗೆ 11 ಗಂಟೆಗೆ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಆಡಳಿತ ಕಛೇರಿಯಲ್ಲಿರುವ "ಸಿಂಡಿಕೇಟ್ ಸಭಾಂಗಣ"ದಲ್ಲಿ ಜರುಗಿದ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ಅವಗಾಹನೆಗಾಗಿ ಸಲ್ಲಿಸಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,
ಕುಲಸಚಿವರು

ಕುಲಸಚಿವರು
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ
ರಾಯಚೂರು

**ಲಗತ್ತು:**
ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿ.

**ಪ್ರತಿಗಳನ್ನು ಅವಗಾಹನೆ ಹಾಗೂ ಮಾಹಿತಿಗಾಗಿ ಗೌರವ ಪೂರ್ವಕವಾಗಿ ಸಲ್ಲಿಸಲಾಗಿದೆ :**
1) ಮಾನ್ಯ ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು–560001.
2) ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು), ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ, ಬೆಂಗಳೂರು–560 001.
3) ಕುಲಸಚಿವರು (ಮೌಲ್ಯಮಾಪನ), ಆ.ಶ್ರೀ.ಮ.ವಾ. ವಿಶ್ವವಿದ್ಯಾನಿಲಯ, ರಾಯಚೂರು.
4) ಹಣಕಾಸು ಅಧಿಕಾರಿಗಳು, ಆ.ಶ್ರೀ.ಮ.ವಾ. ವಿಶ್ವವಿದ್ಯಾನಿಲಯ, ರಾಯಚೂರು.
5) ಮುಖ್ಯಸ್ಥರು/ಸಂಯೋಜಕರು ಎಲ್ಲಾ ಅಧ್ಯಯನ ವಿಭಾಗಗಳು, ಆ.ಶ್ರೀ.ಮ.ವಾ. ವಿಶ್ವವಿದ್ಯಾನಿಲಯ, ರಾಯಚೂರು.
6) ವಿದ್ಯಾರ್ಥಿ ಕಲ್ಯಾಣ ಅಧಿಕಾರಿಗಳು, ಆ.ಶ್ರೀ.ಮ.ವಾ. ವಿಶ್ವವಿದ್ಯಾನಿಲಯ, ರಾಯಚೂರು.
7) ಉಪಕುಲಸಚಿವರು, ಆ.ಶ್ರೀ.ಮ.ವಾ. ವಿಶ್ವವಿದ್ಯಾನಿಲಯ, ರಾಯಚೂರು.
8) ನಿರ್ದೇಶಕರು ಕಾಲೇಜು ಅಭಿವೃದ್ಧಿ ಪರಿಷತ್, ಆ.ಶ್ರೀ.ಮ.ವಾ. ವಿಶ್ವವಿದ್ಯಾನಿಲಯ, ರಾಯಚೂರು.
9) ಗ್ರಂಥಪಾಲಕರು, ಆ.ಶ್ರೀ.ಮ.ವಾ. ವಿಶ್ವವಿದ್ಯಾನಿಲಯ, ರಾಯಚೂರು.
10) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಆ.ಶ್ರೀ.ಮ.ವಾ. ವಿಶ್ವವಿದ್ಯಾನಿಲಯ, ರಾಯಚೂರು.
11) ಕಚೇರಿ ಕಡತ.

# ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು

**ದಿನಾಂಕ: 18.12.2025 ರಂದು ಗುರುವಾರ ಬೆಳಗ್ಗೆ 11.00 ಗಂಟೆಗೆ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಸಭಾಂಗಣದಲ್ಲಿ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ನಡಾವಳಿಗಳು.**

**ಸಭೆಯಲ್ಲಿ ಉಪಸ್ಥಿತರಿದ್ದ ಅಧಿಕಾರಿಗಳು/ಸದಸ್ಯರು**

1. ಪ್ರೊ. ಶಿವಾನಂದ ಕೆಳಗಿನಮನಿ : ಅಧ್ಯಕ್ಷರು
2. ಪ್ರೊ. ಪಾರ್ವತಿ ಸಿ. ಎಸ್, (ಡೀನರು) : ಸದಸ್ಯರು
3. ಪ್ರೊ. ಪಿ. ಭಾಸ್ಕರ್, (ಡೀನರು) : ಸದಸ್ಯರು
4. ಡಾ. ಸುಯಮೀಂದ್ರ ಕುಲಕರ್ಣಿ (ಡೀನರು) : ಸದಸ್ಯರು
5. ಡಾ. ಲತಾ ಎಂ.ಎಸ್, (ಡೀನರು) : ಸದಸ್ಯರು
6. ಶ್ರೀ ಥಾಮಸ್ ಬೆಂಜಮಿನ್ : ಸದಸ್ಯರು
7. ಶ್ರೀ ಸುಶೀಲ್ ಕುಮಾರ್ ತಂದೆ ಮಲ್ಲಯ್ಯ : ಸದಸ್ಯರು
8. ಶ್ರೀ. ಅನಿಲಕುಮಾರ ರಾಜಣ್ಣ : ಸದಸ್ಯರು
9. ಶ್ರೀ ಚಂದ್ರಶೇಖರಗೌಡ ಬಿನ್ ಸಿದ್ದನಗೌಡ ಮೋ ಪಾಟೀಲ್ : ಸದಸ್ಯರು
10. ಶ್ರೀ ರಮೇಶ ತಂದೆ ಸತ್ಯಪ್ಪ : ಸದಸ್ಯರು
11. ಡಾ. ಯಂಕಣ್ಣ : ಸದಸ್ಯರು
12. ಡಾ. ಸಿದ್ದಪ್ಪ : ಸದಸ್ಯರು
13. ಡಾ. ಎಮ್ ವಾರಿಸ್ : ಸದಸ್ಯರು
14. ಶ್ರೀ. ಪರ್ವತರೆಡ್ಡಿ : ಸದಸ್ಯರು
15. ಡಾ. ಚನ್ನಬಸಪ್ಪ ಮೇಟಿ : ಸದಸ್ಯರು
16. ಡಾ. ಈರಣ್ಣ. ಪೂಜಾರಿ : ಸದಸ್ಯರು
17. ಶ್ರೀ. ಸತ್ಯನಾರಾಯಣ ಶ್ರೇಷ್ಠಿ : ಸದಸ್ಯರು
18. ಡಾ. ಈರಣ್ಣ. ಜೆ : ಸದಸ್ಯರು
19. ಶ್ರೀ. ಶೇಖಪ್ಪ. ಬಿ. ರ‍್ಯಾಖಾ : ಸದಸ್ಯರು
20. ಡಾ. ಜಿ.ಎಸ್.ಬಿರಾದಾರ, ಗ್ರಂಥಪಾಲಕರು : ಸದಸ್ಯರು
21. ಶ್ರೀಮತಿ. ಗಾಯಿತ್ರಿ ಕೆ.ಎಸ್.ಎ.ಎಸ್ ಹಣಕಾಸು ಅಧಿಕಾರಿಗಳು : ಸದಸ್ಯರು
22. ಪ್ರೊ. ಜ್ಯೋತಿ ದಮ್ಮ ಪ್ರಕಾಶ್, ಕುಲಸಚಿವರು (ಮೌಲ್ಯಮಾಪನ) : ಸದಸ್ಯರು
23. ಡಾ. ಎ. ಚನ್ನಪ್ಪ ಕೆ.ಎ.ಎಸ್. ಕುಲಸಚಿವರು : ಸದಸ್ಯ ಕಾರ್ಯದರ್ಶಿಗಳು

ಸರ್ಕಾರದಿಂದ ನೂತನವಾಗಿ ನಾಮನಿರ್ದೇಶನಗೊಂಡ ಏಳು ವಿದ್ಯಾವಿಷಯಕ ಪರಿಷತ್ ಸದಸ್ಯರನ್ನು ಸನ್ಮಾನಿಸಿ ಸ್ವಾಗತಿಸಲಾಯಿತು.

ಕುಲಸಚಿವರು ಹಾಜರಿದ್ದ ಕುಲಸಚಿವರು (ಮೌಲ್ಯಮಾಪನ), ಹಣಕಾಸು ಅಧಿಕಾರಿಗಳು ಹಾಗೂ ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಸದಸ್ಯರನ್ನು ಸ್ವಾಗತಿಸುತ್ತ ಸಭಾಧ್ಯಕ್ಷರ ಅನುಮತಿಯೊಂದಿಗೆ ಈ ಕೆಳಗಿನ ವಿಷಯಗಳನ್ನು ಒಂದೊಂದಾಗಿ ಚರ್ಚಿಸಿದರು.

**ವಿಷಯ ಕ್ರಮಾಂಕ (1) :**

ದಿನಾಂಕ 10.09.2025 ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಕುರಿತು.

...2

<u>ಸಭೆಯ ನಿರ್ಣಯ</u>: ದೃಢೀಕರಿಸಲಾಯಿತು.

**ವಿಷಯ ಕ್ರಮಾಂಕ (2) :**

2025-26ನೇ ಶೈಕ್ಷಣಿಕ ಸಾಲಿಗೆ ಸ್ನಾತಕೋತ್ತರ ಪದವಿಗೆ ರಚಿಸಿದ ಎಲ್ಲಾ ವಿಷಯಗಳ ಪಠ್ಯಕ್ರಮದ ಅನುಮೋದನೆ ಕುರಿತು.

**<u>ಸಭೆಯ ನಿರ್ಣಯ:</u>** ವಿಶ್ವವಿದ್ಯಾನಿಲಯ ಈಗಾಗಲೇ ರಚಿಸಿರುವ ಪಠ್ಯಕ್ರಮದಲ್ಲಿ ಸಮಾಜವಿಜ್ಞಾನ ನಿಕಾಯದ (ಸಮಾಜಶಾಸ್ತ್ರ, ಇತಿಹಾಸ, ರಾಜ್ಯಶಾಸ್ತ್ರ ಮತ್ತು ಅರ್ಥಶಾಸ್ತ್ರ) ಕೆಲವು ವಿಷಯಗಳ Credit Points ಗಳಲ್ಲಿ ಬದಲಾವಣೆ ಇರುವುದು ಕಂಡುಬಂದಿರುತ್ತದೆ ಹಾಗೂ ವಿಜ್ಞಾನ ನಿಕಾಯದ (ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ ಮತ್ತು ಸೂಕ್ಷ್ಮಜೀವಶಾಸ್ತ್ರ) ವಿಷಯಗಳ ಆಧುನಿಕತೆಗೆ ಹೊಂದುವ ವಿಭಾಗಗಳಲ್ಲಿ ಸ್ಪರ್ಧೆಯನ್ನು ಮನಗಂಡ ಆಯಾ ವಿಭಾಗಗಳ ಮುಖ್ಯಸ್ಥರು ಹಾಗೂ ಡೀನರು 2025-26ನೇ ಶೈಕ್ಷಣಿಕ ಸಾಲಿಗೆ ಪಠ್ಯಕ್ರಮದಲ್ಲಿ ಅಳವಡಿಸಿಕೊಂಡಿರುವ ಕ್ರಮವನ್ನು ಸಭೆಯು ಚರ್ಚಿಸಿ ಅನುಮೋದನೆ ನೀಡಿತು.

**ವಿಷಯ ಕ್ರಮಾಂಕ (3) :**

2025-26ನೇ ಶೈಕ್ಷಣಿಕ ಸಾಲಿಗೆ ಪಿ.ಎಚ್.ಡಿ ಪದವಿಯ ಕೋರ್ಸ್‌ವರ್ಕ್‌ಗೆ ರಚಿಸಿದ ಪಠ್ಯಕ್ರಮದ ಅನುಮೋದನೆ ಕುರಿತು.

**<u>ಸಭೆಯ ನಿರ್ಣಯ:</u>** ಸದರಿ ವಿಷಯ ಕುರಿತಂತೆ ಈ ಕೆಳಕಂಡ ವಿಷಯಗಳ ಪಿ.ಹೆಚ್.ಡಿ ಪದವಿ ಕೋರ್ಸ್‌ವರ್ಕ್‌ಗೆ ರಚಿಸಿದ ಪಠ್ಯಕ್ರಮವನ್ನು ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಿ ದೃಢೀಕರಿಸಲಾಯಿತು.

| ಕ್ರ. ಸಂ. | ವಿಷಯ |
|---|---|
| 1 | ಕನ್ನಡ |
| 2 | ರಾಜ್ಯಶಾಸ್ತ್ರ |
| 3 | ಉಪಕರಣಾತ್ಮಕ ತಂತ್ರಜ್ಞಾನ |
| 4 | ಸೂಕ್ಷ್ಮಜೀವಶಾಸ್ತ್ರ |
| 5 | ರಸಾಯನಶಾಸ್ತ್ರ |
| 6 | ಗ್ರಂಥಾಲಯ ಹಾಗೂ ಮಾಹಿತಿ ತಂತ್ರಜ್ಞಾನ ವಿಭಾಗ |

**ವಿಷಯ ಕ್ರಮಾಂಕ (4) :**

ಸರ್ಕಾರದ ಆದೇಶದಂತೆ 2026-27ನೇ ಶೈಕ್ಷಣಿಕ ಸಾಲಿನ ಸಂಯೋಜನೆ ಪ್ರಕ್ರಿಯೆ ಪ್ರಾರಂಭಿಸುವ ಕುರಿತು.

<u>ಸಭೆ ನಿರ್ಣಯ</u>: 2026-27ನೇ ಸಾಲಿನ ಸಂಯೋಜನೆ ಪ್ರಕ್ರಿಯೆಗೆ ಸಂಬಂಧಿಸಿದಂತೆ ವಿಷಯಗಳನ್ನು ಚರ್ಚಿಸಲಾಗಿ ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲ ಕ್ರೋಢೀಕರಣಕ್ಕೆ ವಿಶ್ವವಿದ್ಯಾನಿಲಯದಿಂದ ಪ್ರತಿ ಕಾಲೇಜುಗಳಿಗೆ ವಿಧಿಸುವ ಸಂಯೋಜನಾ ಶುಲ್ಕ, ಪ್ರವೇಶಾತಿ ಶುಲ್ಕ ಮತ್ತು ಪರೀಕ್ಷಾ ಶುಲ್ಕಗಳನ್ನು ಸಂದಾಯ ಮಾಡುವುದು ಕಾಲೇಜುಗಳ ಜವಾಬ್ದಾರಿಯಾಗಿರುತ್ತದೆ. ಆದರೆ, ಕಾಲೇಜುಗಳು ಸದರಿ ಶುಲ್ಕಗಳ ಪಾವತಿಯನ್ನು ಬಾಕಿ ಉಳಿಸಿಕೊಳ್ಳುವುದರಿಂದ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ಬಿಕ್ಕಟ್ಟು ಎದುರಾಗುತ್ತದೆ. ಈ ವಿಚಾರವನ್ನು ಪ್ರಸ್ತಾಪಿಸಿ ಎಲ್ಲಾ ಕಾಲೇಜುಗಳಿಂದ ಬೇಬಾಕಿ ಪತ್ರವನ್ನು ಪೂರೈಸಿದಲ್ಲಿ ಮಾತ್ರ ಈ ಬಾರಿಯ 2026-27ನೇ ಸಾಲಿನ ಸಂಯೋಜನೆಗೆ ವಿಶ್ವವಿದ್ಯಾನಿಲಯದಿಂದ ತಂಡವನ್ನು ಕಳುಹಿಸಿಕೊಡಲಾಗುವುದು ಎಂದು ಪ್ರಸ್ತಾಪಿಸಿತು. ಸಭೆಯು ಈ ಪ್ರಸ್ತಾವನೆಯನ್ನು ಸ್ವೀಕರಿಸಿದರು. ಮುಂದುವರೆದು, ಎಲ್ಲಾ ವಿದ್ಯಾವಿಷಯಕ ಪರಿಷತ್ ಸದಸ್ಯರು

...3

ಕಾಲೇಜನವರು ಹೊಸ ಪದವಿ ಕೋರ್ಸ್ ಪ್ರಾರಂಭಿಸುವಾಗ ವಿಶ್ವವಿದ್ಯಾನಿಲಯಕ್ಕೆ ಪಾವತಿಸುತ್ತಿರುವ ಶೇವಣಿ ಮೊತ್ತಕ್ಕೆ ಸಂಬಂಧಿಸಿದಂತೆ ನಿಯಮಾವಳಿಗಳನ್ನು ರೂಪಿಸಲು ತಿಳಿಸಿದರು ಹಾಗೂ B.Ed., ಮಹಾವಿದ್ಯಾಲಯಗಳಿಗೆ NCTE ನಿಯಮಾವಳಿಗಳ ಪ್ರಕಾರ ಸಂಯೋಜನೆ ಪ್ರಕ್ರಿಯೆ ಕೈಗೊಳ್ಳಲು ನಿರ್ಧರಿಸಲಾಯಿತು. ಮುಂದುವರೆದು, ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಇಡಿ 212 ಯುಎನ್ಇ 2004 ದಿನಾಂಕ 23.10.2025ರ ಕಾಲೇಜುಗಳ ಸಂಯೋಜನಾ ಪ್ರಕ್ರಿಯೆಯ ವೇಳಾಪಟ್ಟಿಗನುಗುಣವಾಗಿ 2026–27ನೇ ಸಾಲಿನಲ್ಲಿ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ (ರಾಯಚೂರು ವಿಶ್ವವಿದ್ಯಾಲಯ) ಸಂಲಗ್ನತೆಗೆ ಒಳಪಟ್ಟಿರುವ ಕಾಲೇಜುಗಳ ಸಂಯೋಜನಾ ಪ್ರಕ್ರಿಯೆ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪ್ರಕರಣ (59) ರಡಿ ಕೈಗೊಳ್ಳಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ ಕ್ರಮಾಂಕ (5) :**

ಅಧ್ಯಕ್ಷರ ಅನುಮತಿಯ ಮೇರೆಗೆ ಇತರೆ ವಿಷಯಗಳ ಕುರಿತು ಚರ್ಚೆ.

ವಿದ್ಯಾರ್ಥಿಗಳಿಗೆ ಚಿನ್ನದ ಪದಕ ನೀಡುವ ಕುರಿತು.

**ಸಭೆ ನಿರ್ಣಯ:** ಚಿನ್ನದ ಪದಕ ವಿತರಿಸುವ ಕುರಿತಂತೆ ಚರ್ಚಿಸಲಾಗಿ ಹಿಂದಿನ ಚಿನ್ನದ ಪದಕ ಸಮಿತಿಯ ನಿರ್ಣಯದಂತೆ ರೂ.1,50,000/– ಮಾನ್ಯ ಕುಲಪತಿಗಳು ಚಿನ್ನದ ಪದಕಕ್ಕೆ ದೇಣಿಗೆ ನೀಡುವುದಾಗಿ ಸಭೆಯಲ್ಲಿ ತಿಳಿಸಿದರು. ಸಭೆಯ ಸದಸ್ಯರು ಅಭಿನಂದನೆಯನ್ನು ಸಲ್ಲಿಸಿದರು. ಈ ವಿಚಾರವಾಗಿ ಚಿನ್ನದ ಪದಕದ ಸಮಿತಿಯ ಸದಸ್ಯರುಗಳು ಇನ್ನೊಂದು ಬಾರಿ ಸಭೆ ಸೇರಿ ರಾಯಚೂರು ಹಾಗೂ ಯಾದಗಿರಿ ಜಿಲ್ಲೆಯಲ್ಲಿರುವ ಗಣ್ಯ ವ್ಯಕ್ತಿಗಳನ್ನು ಭೇಟಿ ಮಾಡಿ ಕನಿಷ್ಠ ಪಕ್ಷ 50 ಚಿನ್ನದ ಪದಕಗಳ ದೇಣಿಗೆ ಸಂಗ್ರಹ ಮಾಡುವಂತೆ ಸಭೆಯ ಸದಸ್ಯರಾದ ಶ್ರೀ ಥಾಮಸ್ ಬೇಂಜಮಿನ್ ಹಾಗೂ ಶ್ರೀ ಸತ್ಯನಾರಾಯಣ ಶ್ರೇಷ್ಠಿ ತಿಳಿಸಿದರು. ಸದಸ್ಯರುಗಳಾದ ಶ್ರೀ ಸತ್ಯನಾರಾಯಣ ಶ್ರೇಷ್ಠಿ ಮೂರು ಚಿನ್ನದ ಪದಕಗಳನ್ನು ಹಾಗೂ ಶ್ರೀ ಅನೀಲ ರಾಜಣ್ಣ ಒಂದು ಚಿನ್ನದ ಪದಕಗಳಿಗೆ ದೇಣಿಗೆ ನೀಡಿಸುವ ಜವಾಬ್ದಾರಿಯನ್ನು ವಹಿಸಿಕೊಂಡರು. ಸಭೆಯು ಈ ಕುರಿತು ಅನುಮೋದನೆ ನೀಡಿತು.

ಸಭೆಯ ಕೊನೆಯಲ್ಲಿ ಕುಲಸಚಿವರು ಮಾನ್ಯ ಕುಲಪತಿಗಳಿಗೆ, ಉಪಸ್ಥಿತರಿದ್ದ ಎಲ್ಲಾ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ವಂದಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು.

18/12

**ಡಾ. ಎ. ಚನ್ನಪ್ಪ., ಕೆ.ಎ.ಎಸ್.**
ಕುಲಸಚಿವರು ಹಾಗೂ ಸದಸ್ಯಕಾರ್ಯದರ್ಶಿಗಳು
ಕುಲಸಚಿವರು
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ
ರಾಯಚೂರು

18/12/25

**ಪ್ರೊ. ಶಿವಾನಂದ ಕೆಳಗಿನಮನಿ**
ಕುಲಪತಿಗಳು ಹಾಗೂ ಅಧ್ಯಕ್ಷರು